


# ಸಬಲೀಕರಣದ ಹಾದಿಯಲ್ಲಿ ಕಾನೂನಿನ ಊರುಗೋಲು!

**ಘನತೆ ಹಾಗೂ ಆತ್ಮವಿಶ್ವಾಸದಿಂದ ಬದುಕುವ ನಿಟ್ಟಿನಲ್ಲಿ ಕಾನೂನು ಮತ್ತು ಸಂವಿಧಾನ ಹೆಣ್ಣಿಗೆ ಭೀಮಬಲ. ಕಾನೂನಿನ ಕಂಡಿಗಳನ್ನು ಹುಡುಕಿಕೊಂಡು ಕೆಲವರು ತಪ್ಪಿಸಿಕೊಳ್ಳುತ್ತಿದ್ದಾರಾದರೂ, ಕಾನೂನಿನ ಬಲ ಇಲ್ಲದೆ ಹೋಗಿದ್ದರೆ ಹೆಣ್ಣಿನ ಸ್ಥಿತಿಯನ್ನು ಕಲ್ಪಿಸಿಕೊಳ್ಳುವುದೂ ಅಸಹನೀಯವಾಗುತ್ತಿತ್ತು.**

ಹೆಣ್ಣಾಗಿ ಹುಟ್ಟಿದರೆ ಪಾಪ, ಯಾವುದೋ ಕರ್ಮಫಲದಿಂದ ಈ ಜನ್ಮದಲ್ಲಿ ಹೆಣ್ಣಾಗಿ ಹುಟ್ಟಿದ್ದಾಳೆ. ಹೆಣ್ಣು ಯಾವತ್ತಿದ್ದರೂ ಗಂಡಿನ ನೆರಳಲ್ಲೇ ಬದುಕಬೇಕು ಎಂಬ ಪುರುಷಪ್ರಣೀತ ಮಾತುಗಳಲ್ಲೇ ಹೆಣ್ಣು ತನ್ನ ಸಬಲೀಕರಣದ ಹಾದಿಯನ್ನು ಮರೆತುಬಿಟ್ಟಿದ್ದಳು. ತನಗೂ ಗಂಡಿನಂತೆ ವಿವೇಚನಾ ಶಕ್ತಿ ಇದೆ, ಅದನ್ನು ಬಳಸಬೇಕು ಎಂಬ ತಿಳಿವಳಿಕೆ ಜಾಗೃತಗೊಳ್ಳದಂತೆ ಆಕೆಯನ್ನು ರೂಪಿಸಲಾಗಿತ್ತು. ಆದರೆ, ಶಿಕ್ಷಣ ದೊರೆಯತೊಡಗಿದ ಮೇಲೆ, ಸಂವಿಧಾನದ ನೆರವೂ ಸಿಗತೊಡಗಿದ ಮೇಲೆ – ತನಗೂ ವಿವೇಚನೆ, ಯೋಚನಾ ಶಕ್ತಿ ಇದೆ ಎಂಬ ಅರಿವು ಹೆಣ್ಣಿಗೆ ಬರತೊಡಗಿತು. ಸಂವಿಧಾನ, ಕಾನೂನಿನ ಮೂಲಕ ಸಮತೆ ಮತ್ತು ಘನತೆಯ ಜೀವನ ತಮಗೂ ಇದೆ ಎನ್ನುವ ತಿಳಿವಳಿಕೆ ಹೆಣ್ಣುಮಕ್ಕಳಿಗೆ ಮೂಡಿದೆ.

ಕಾನೂನು ಮತ್ತು ಸಂವಿಧಾನ ನಮ್ಮ ದೇಶದ ಹೆಣ್ಣುಮಕ್ಕಳ ಮೇಲೆ ಬೀರಿರುವ ಪ್ರಭಾವ ಅಗಾಧವಾದದ್ದು. ಅಂಥ ಕೆಲವು ಪ್ರಮುಖ ಕಾನೂನುಗಳ ಮೂಲಕ ಬಾಲ್ಯವಿವಾಹ, ವರದಕ್ಷಿಣೆ, ದ್ವಿಪತ್ನಿತ್ವ–ಬಹುಪತ್ನಿತ್ವ, ಕೌಟುಂಬಿಕ ದೌರ್ಜನ್ಯ, ಭ್ರೂಣಹತ್ಯೆ, ಗರ್ಭಪಾತ, ಬಾಡಿಗೆ ತಾಯ್ತನ, ವಿಚ್ಛೇದನ, ಅತ್ಯಾಚಾರ, ಅಪಹರಣ, ಆ್ಯಸಿಡ್ ದಾಳಿ, ಲೈಂಗಿಕ ಕಿರುಕುಳ, ಉದ್ಯೋಗದ ಸ್ಥಳದಲ್ಲಿ ಕಿರುಕುಳ, ಮಹಿಳೆಯ ಅಶ್ಲೀಲ ಚಿತ್ರಣದಂಥ ಸಮಸ್ಯೆಗಳನ್ನು ಬಹುಮಟ್ಟಿಗೆ ನೀಗಿಸಲು ಸಾಧ್ಯವಾಗಿದೆ.



■ **ಮಂಜುಳಾ ದೇವಿ**
ವಕೀಲರು, ಹೈಕೋರ್ಟ್

### ಬಾಲ್ಯವಿವಾಹ-ವರದಕ್ಷಿಣೆಗೆ ಅಂಕುಶ

ಹೆಣ್ಣನ್ನು ಹೊರೆ ಎಂದೇ ಭಾವಿಸುತ್ತಿದ್ದ ಕಾಲದಲ್ಲಿ ಆಕೆ ಋತುಮತಿಯಾದ ಬಳಿಕ ಬಾಲ್ಯದಲ್ಲೇ ವಿವಾಹ ಮಾಡಿಕೊಡಲಾಗುತ್ತಿತ್ತು. ಎಷ್ಟೋ ಬಾರಿ ಮೈನೆರೆಯುವ ಮೊದಲೇ ತೊಟ್ಟಿಲಲ್ಲೇ ಮಕ್ಕಳಿಗೆ ವಿವಾಹ ಮಾಡುತ್ತಿದ್ದರು. ಬಾಲ್ಯವಿವಾಹಕ್ಕೊಳಗಾದ ಹೆಣ್ಣುಮಕ್ಕಳಿಗೆ ಲೈಂಗಿಕ ಜೀವನ, ದಾಂಪತ್ಯ, ಮಕ್ಕಳು ಎಂಬ ಕಲ್ಪನೆಯೇ ಇರುತ್ತಿರಲಿಲ್ಲ. ಹೆಣ್ಣನ್ನು ಮದುವೆ ಮಾಡಿಕೊಟ್ಟರೆ ಸಾಕು, ತಮ್ಮ ಜವಾಬ್ದಾರಿ ಮುಗಿದಂತೆ ಎಂದು ಪೋಷಕರೂ ಭಾವಿಸುತ್ತಿದ್ದರು. ಆದರೆ, ಸ್ವಾತಂತ್ರ್ಯಾನಂತರ ರೂಪುಗೊಂಡ ಕಾನೂನುಗಳ

